17

ಇಲಾಖೆ / ವಿಷಯ : DEPARTMENT / SUBJECT: ಸಂಸದೀಯ ಸಮಿತಿ

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ ದಿನಾಂಕ : DATE: 22.1.2021

ನರೇಂದ್ರ ಭೇಟಿ ನೀಡಿ ಪರಿಶೀಲಿಸಿದರು.

### ಗೃಹ ಸಚಿವ ಅಮಿತ್ ಶಾ ಖಾತೆ ಸ್ಥಗಿತ

# ಸಂಸದೀಯ ಸಮಿತಿಯಿಂದ ಟ್ವಿಟರ್ ಅಧಿಕಾರಿಗಳ ವಿಚಾರಣೆ

ಪ್ರ.ವಾ. 22-1-2021

ನವದೆಹಲಿ (ಪಿಟಿಐ): ಗೃಹ ಸಚಿವ ಅಮಿತ್ ಶಾ ಅವರ ಖಾತೆಯನ್ನು ಕಳೆದ ವರ್ಷ ನವೆಂಬರ್‌ನಲ್ಲಿ ಟ್ವಿಟರ್ ಸ್ಥಗಿತ-ಗೊಳಿಸಿತ್ತು. ಈ ಹಿನ್ನೆಲೆಯಲ್ಲಿ ಸಂಸ್ಥೆಯ ಅಧಿಕಾರಿಗಳು ಮಾಹಿತಿ ತಂತ್ರಜ್ಞಾನದ ಮೇಲಿನ ಸಂಸದೀಯ ಸಮಿತಿ ಎದುರು ಗುರುವಾರ ಹಾಜರಾಗಿ ವಿವರಣೆ ನೀಡಿದರು.

'ಸಚಿವ ಶಾ ಅವರ ಖಾತೆಯನ್ನು ತಡೆಹಿಡಿದಿದ್ದು ಯಾಕೆ. ಆ ರೀತಿ ಕ್ರಮ ಕೈಗೊಳ್ಳಲು ನಿಮಗೆ ಅಧಿಕಾರ ಕೊಟ್ಟವರು ಯಾರು' ಎಂದು ಪ್ರಶ್ನಿಸಲಾಯಿತು.

'ಸಚಿವರ ಟ್ವಿಟರ್ ಖಾತೆಯಲ್ಲಿ ಹಂಚಿಕೊಳ್ಳಲಾಗಿದ್ದ ಚಿತ್ರವೊಂದರ ಕಾಪಿರೈಟ್‌ಗೆ ಸಂಬಂಧಿಸಿದಂತೆ ದೂರು ಬಂದಿತ್ತು. ಹೀಗಾಗಿ ಅವರ ಖಾತೆಯನ್ನು ತಡೆಹಿಡಿಯಲಾಗಿತ್ತು ಎಂಬುದಾಗಿ ಟ್ವಿಟರ್ ಪ್ರತಿನಿಧಿ ಉತ್ತರಿಸಿದರು' ಎಂದು ಇವೇ ಮೂಲಗಳು ಹೇಳಿವೆ.

ಅಲ್ಲದೇ, 'ಖಾತೆಯನ್ನು ತಡೆ ಹಿಡಿದ ನಿರ್ಧಾರವನ್ನು ಕೂಡಲೇ ಹಿಂಪಡೆಯಲಾಯಿತು. ನಂತರ ಖಾತೆಯನ್ನು ಸಕ್ರಿಯಗೊಳಿಸಲಾಯಿತು. ಇದು ಅಜಾ-ಗರೂಕತೆಯಿಂದಾದ ಪ್ರಮಾದ' ಎಂದೂ ಎಂದು ಮೂಲಗಳು ಹೇಳಿವೆ.

ಟ್ವಿಟರ್‌ನಲ್ಲಿ ಭಾರತದ ಭೂಪಟವನ್ನು ತಪ್ಪಾಗಿ ಪ್ರಕಟಿಸಿದ್ದು ಸೇರಿದಂತೆ ಹಲವಾರು ವಿಷಯಗಳ ಕುರಿತು ಟ್ವಿಟರ್ ಅಧಿಕಾರಿಗೆ ಸಮಿತಿ ಸದಸ್ಯರು ಕಠಿಣ ಪ್ರಶ್ನೆಗಳನ್ನು ಕೇಳಿದರು. ಸಾಮಾಜಿಕ ಮಾಧ್ಯಮಗಳ ದುರ್ಬಳಕೆ ತಡೆಯುವುದು, ಈ ಮಾಧ್ಯಮಗಳನ್ನು ಬಳಸುವ ಜನರ ಹಕ್ಕುಗಳ ರಕ್ಷಣೆ ಹಾಗೂ ಮಹಿಳೆಯರ ಸುರಕ್ಷತೆಗೆ ಸಂಬಂಧಿಸಿದಂತೆ ಸಹ ಪ್ರಶ್ನೆಗಳ ಸುರಿಮಳೆಗೈದರು ಎಂದು ಮೂಲಗಳು ಹೇಳಿವೆ.

ಟ್ವಿಟರ್ ಅಧಿಕಾರಿಗಳು ನೀಡಿದ ವಿವರಣೆಯಿಂದ ಸಮಿತಿಯ ಕೆಲವು ಸದಸ್ಯರು ತೃಪ್ತರಾಗಲಿಲ್ಲ. ಹೀಗಾಗಿ, ಕೆಲವರ ಖಾತೆಗಳನ್ನು ಸ್ಥಗಿತಗೊಳಿಸುವ ಬಗ್ಗೆ ಹೇಗೆ ನಿರ್ಧಾರ ಕೈಗೊಳ್ಳಲಾಗು-ತ್ತದೆ, ಕೆಲವು ಖಾತೆಗಳ ವಿರುದ್ಧ ಏನೂ ಕ್ರಮ ಇರುವುದಿಲ್ಲ ಎಂಬ ಬಗ್ಗೆ ವಿವರಣೆ ನೀಡುವಂತೆ ಸದಸ್ಯರು ಸೂಚಿಸಿದರು.